# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್ ರಸ್ತೆ, ತುಮಕೂರು -572103

ಸಂಖ್ಯೆ:ತುವಿ:ಶೈ.ವಿ:UG:2025-26:1679 ದಿನಾಂಕ:29.08.2025

## ಪರಿಷ್ಕೃತ ಸುತ್ತೋಲೆ

ವಿಷಯ : 2025-26ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿ ಪ್ರೋಗ್ರಾಂಗಳ ಪ್ರವೇಶಾತಿಯ ಕುರಿತು.

ಉಲ್ಲೇಖ:
1. ವಿವಿ ಶೈಕ್ಷಣಿಕ ವೇಳಾಪಟ್ಟಿ ಅಧಿಸೂಚನೆ ಪತ್ರದ ಸಂಖ್ಯೆ: ಸಂಖ್ಯೆ: ತುವಿ: ಶೈವಿ:UG:CE:2025-26 /252 ದಿನಾಂಕ:02.05.2025.
2. ವಿವಿ ಶೈಕ್ಷಣಿಕ ವೇಳಾಪಟ್ಟಿ ಅಧಿಸೂಚನೆ ಪತ್ರದ ಸಂಖ್ಯೆ: ಸಂಖ್ಯೆ: ತುವಿ: ಶೈವಿ:UG:CE:2025-26 /1400 ದಿನಾಂಕ:04.08.2025.
3. ವಿವಿ ಶೈಕ್ಷಣಿಕ ವೇಳಾಪಟ್ಟಿ ಅಧಿಸೂಚನೆ ಪತ್ರದ ಸಂಖ್ಯೆ: ಸಂಖ್ಯೆ: ತುವಿ: ಶೈವಿ:UG:CE:2025-26 /1534 ದಿನಾಂಕ:16.08.2025.
4. ವಿವಿ ಶೈಕ್ಷಣಿಕ ವೇಳಾಪಟ್ಟಿ ಅಧಿಸೂಚನೆ ಪತ್ರದ ಸಂಖ್ಯೆ: ಸಂಖ್ಯೆ: ತುವಿ: ಶೈವಿ:UG:CE:2025-26 /1593 ದಿನಾಂಕ:19.08.2025.
5. ವಿವಿಧ ಕಾಲೇಜಿನ ಪ್ರಾಂಶುಪಾಲರುಗಳ ಮನವಿ ಪತ್ರ (ವಾಟ್ಸ್‌ಆಫ್) ಸ್ವೀಕೃತಿ ದಿನಾಂಕ:29.08.2025
6. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:29.08.2025

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ಸಂಯೋಜಿತ/ ಘಟಕ/ ಸ್ವಾಯತ್ತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ತಿಳಿಯಪಡಿಸುವುದೇನೆಂದರೆ, ಉಲ್ಲೇಖ (02, 03 & 04)ರ ಶೈಕ್ಷಣಿಕ ವೇಳಾಪಟ್ಟಿಯನ್ವಯದಂತೆ, ವಿಶ್ವವಿದ್ಯಾನಿಲಯದ 2025-26 ನೇ ಶೈಕ್ಷಣಿಕ ಸಾಲಿನ ಮೂರು ವರ್ಷಗಳ ವಿವಿಧ ಸ್ನಾತಕ ಪದವಿ ಕೋರ್ಸುಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಕೋಷ್ಟಕದಲ್ಲಿ ತಿಳಿಸಿರುವಂತೆ ಪ್ರವೇಶಾತಿ ದಿನಾಂಕವನ್ನು ಪರಿಷ್ಕರಿಸಿ ಉಲ್ಲೇಖ (06)ರ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಈ ಕೆಳಕಂಡ ಷರತ್ತಿಗೊಳಪಟ್ಟು ನಿಗದಿಪಡಿಸಲಾಗಿದೆ.

1. ಇನ್ನು ಮುಂದೆ ಯಾವುದೇ ಕಾರಣಕ್ಕೂ ಪ್ರವೇಶಾತಿ ದಿನಾಂಕಗಳನ್ನು ವಿಸ್ತರಿಸಲಾಗುವುದಿಲ್ಲ.
2. ಈಗಾಗಲೇ ದಂಡ ಶುಲ್ಕದೊಂದಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ಕಾಲೇಜುಗಳ ಹಂತದಲ್ಲಿಯೇ ವಿದ್ಯಾರ್ಥಿಗಳಿಗೆ ದಂಡಶುಲ್ಕ ಮರುಪಾವತಿಗೆ ಅಗತ್ಯ ಕ್ರಮವಹಿಸುವುದು.
3. ದಿನಾಂಕ:10.09.2025ರಿಂದ ಪ್ರವೇಶಾತಿ ಅನುಮೋದನೆ ಕಾರ್ಯ ಪ್ರಾರಂಭವಾಗಲಿದ್ದು, (ಪ್ರವೇಶಾತಿಗೆ ಪ್ರತ್ಯೇಕ ವೇಳಾಪಟ್ಟಿಯನ್ನು ನಿಗಧಿಪಡಿಸಿ ತಿಳಿಸಲಾಗುವುದು) ತಮ್ಮ ಕಾಲೇಜಿಗೆ ನಿಗಧಿಪಡಿಸಿದ ದಿನಾಂಕದಂದೇ ಎಲ್ಲಾ ವಿದ್ಯಾರ್ಥಿಗಳ ಮೂಲ ದಾಖಲಾತಿಗಳನ್ನು ಹಾಜರುಪಡಿಸಿ ಪ್ರವೇಶಾನುಮೋದನೆ ಪಡೆಯತಕ್ಕದ್ದು.

| ಕ್ರ.ಸಂ | ವಿವರ | ದಿನಾಂಕ |
|---|---|---|
| 1 | 2025-26ನೇ ಶೈಕ್ಷಣಿಕ ಸಾಲಿಗೆ ಪ್ರವೇಶ ಪಡೆಯುವ ಎಲ್ಲಾ ವಿದ್ಯಾರ್ಥಿಗಳಿಗೆ ದಂಡ ಶುಲ್ಕವಿಲ್ಲದೆ ಪ್ರವೇಶಾತಿಯ ಕೊನೆಯ ದಿನಾಂಕ | 02.09.2025 |
| 2 | 2025-26ನೇ ಶೈಕ್ಷಣಿಕ ಸಾಲಿಗೆ ಪ್ರವೇಶ ಪಡೆಯುವ ಎಲ್ಲಾ ವಿದ್ಯಾರ್ಥಿಗಳಿಗೆ ರೂ.1200/- ದಂಡ ಶುಲ್ಕದೊಂದಿಗೆ ಪ್ರವೇಶಾತಿಯ ಕೊನೆಯ ದಿನಾಂಕ | 06.09.2025 |
| 3 | 2025-26ನೇ ಶೈಕ್ಷಣಿಕ ಸಾಲಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಪ್ರವೇಶಾನುಮೋದನೆಗಾಗಿ ಪಟ್ಟಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕಾದ ಕೊನೆಯ ದಿನಾಂಕ | 08.09.2025 |

ಮುಂದುವರೆದಂತೆ, ಸದರಿ ದಿನಾಂಕದವರೆಗೂ ಯುಯುಸಿಎಂಎಸ್ ಪೋರ್ಟಲ್‌ನ್ನು ಸಕ್ರಿಯಗೊಳಿಸಲಾಗಿದೆ. ಒಂದು ವೇಳೆ ವಿಶ್ವವಿದ್ಯಾನಿಲಯವು ನಿಗಧಿಪಡಿಸಿರುವ ದಿನಾಂಕದೊಳಗೆ ಪ್ರವೇಶ ಪ್ರಕ್ರಿಯೆಯನ್ನು ಪೂರ್ಣಗೊಳಿಸದಿದ್ದಲ್ಲಿ ಕಾಲೇಜಿನವರೆ ಜವಾಬ್ದಾರರಾಗಿರುತ್ತೀರಿ ಎಂದು ಈ ಮೂಲಕ ತಿಳಿಸಲಾಗಿದೆ.

ಕುಲಸಚಿವರು
ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ

ಗೆ

1. ಪ್ರಾಂಶುಪಾಲರುಗಳು ಎಲ್ಲಾ ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು.
2. ಪ್ರಾಂಶುಪಾಲರುಗಳು ವಿಶ್ವವಿದ್ಯಾನಿಲಯ ಘಟಕ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು. ಪು.ತಿ.ನೋ

ಪ್ರತಿಗಳು:

1. ಕುಲಸಚಿವರು (ಮೌಲ್ಯಮಾಪನ) ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು– ವೆಬ್‌ಸೈಟ್‌ನಲ್ಲಿ ಇಂದೇ ಪ್ರಕಟಿಸುವುದು
6. ಕಛೇರಿ ಪ್ರತಿ.